ಕರ್ನಾಟಕ ವಿಧಾನ ಪರಿಷತ್ತು

05. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1501
06. ಸದಸ್ಯರ ಹೆಸರು : ಶ್ರೀ ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
07. ಉತ್ತರಿಸುವ ದಿನಾಂಕ : 10.03.2022
08. ಉತ್ತರಿಸುವ ಸಚಿವರು : ಮಾನ್ಯ ಗೃಹ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿರುವ ಎಲ್ಲಾ ಪಡೆಗಳು ಸೇರಿದಂತೆ (ಎಲ್ಲಾ ಬೆಟಾಲಿಯನ್) ಪೊಲೀಸ್ ಸಿಬ್ಬಂದಿ ವರ್ಗದವರ ಸಂಖ್ಯೆ ಎಷ್ಟು; (ಪಿ.ಸಿ. ಹುದ್ದೆಯಿಂದ ಹಿಡಿದು ಐ.ಪಿ.ಎಸ್. ಹುದ್ದೆಯವರೆಗೆ ಪ್ರತಿಯೊಂದು ವೃಂದದ ಹುದ್ದೆಗಳ ಪ್ರತ್ಯೇಕವಾದ ಅಂಕಿ ಅಂಶದ ಮಾಹಿತಿಯನ್ನು ನೀಡುವುದು)	ರಾಜ್ಯದಲ್ಲಿರುವ ಎಲ್ಲಾ ಪಡೆಗಳು ಸೇರಿದಂತೆ (ಎಲ್ಲಾ ಬೆಟಾಲಿಯನ್) ಪೊಲೀಸ್ ಸಿಬ್ಬಂದಿ ವರ್ಗದವರ ಮಾಹಿತಿ ಹೀಗಿದೆ. **ಮಂಜೂರಾತಿ**: 106179; **ಹಾಲಿ ಬಲ**: 92410; **ರಿಕ್ತಸ್ಥಾನ**: 13769 ವಿವರಗಳನ್ನು ಅನುಬಂಧ-1ರಲ್ಲಿ ನೀಡಿದೆ
ಆ)	ಪೊಲೀಸ್ ಸಿಬ್ಬಂದಿಯವರ ವೇತನ ಹಾಗೂ ಭತ್ಯೆಗಳ ತಾರತಮ್ಯದ ಬಗ್ಗೆ ಪರಿಶೀಲಿಸಿ ಸೂಕ್ತವಾದ ವರದಿಯನ್ನು ಸಲ್ಲಿಸಲು ಶ್ರೀ ರಾಘವೇಂದ್ರ ಔರಾದ್ಕರ್ ರವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಲಾಗಿತ್ತೇ; (ವಿವರ ನೀಡುವುದು)	ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳವರ ವೇತನ ಶ್ರೇಣಿಯ ಪರಿಷ್ಕರಣೆ ಕುರಿತು ಸರ್ಕಾರದ ಆದೇಶ ಸಂ: ಒಇ/336/ಪೊಲೀಸ್ ಸೇವೆಗಳು/2016 ದಿನಾಂಕ:28.06.2016ರಲ್ಲಿ ಶ್ರೀ ರಾಘವೇಂದ್ರ ಔರಾದ್ಕರ್ ರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿರುತ್ತದೆ.
ಇ)	ಸಮಿತಿಯನ್ನು ರಚಿಸಿದ್ದಲ್ಲಿ, ಆ ಸಮಿತಿಯು ಯಾವಾಗ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತ್ತು; ಆ ವರದಿಯ ಸಾರಾಂಶಗಳೇನು; ಸದರಿ ವರದಿಯ ಶಿಫಾರಸ್ಸುಗಳನ್ನು ಜಾರಿಗೆ ತರಲಾಗಿದೆಯೇ; (ಸಂಪೂರ್ಣ ವಿವರದೊಂದಿಗೆ ಮಾಹಿತಿ ನೀಡುವುದು)	ಶ್ರೀ ರಾಘವೇಂದ್ರ ಔರಾದ್ಕರ್ ರವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಸಮಿತಿಯು ದಿನಾಂಕ:15.09.2016ರಂದು ಸರ್ಕಾರಕ್ಕೆ ವರದಿ ಸಲ್ಲಿಸಿರುತ್ತದೆ. ಸದರಿ ಸಮಿತಿಯು ಶಿಫಾರಸ್ಸು ಮಾಡಿರುವ ಅಂಶಗಳ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮಗಳ ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ.
ಈ)	ಔರಾದ್ಕರ್ ವರದಿ ಶಿಫಾರಸ್ಸುಗಳನ್ನು ಪೂರ್ಣವಾಗಿ ಜಾರಿಗೆ ತರಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರದೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು)	

HD/41/PPS/2022

(ಆರಗ ಜ್ಞಾನೇಂದ್ರ)
ಮಾನ್ಯ ಗೃಹ ಸಚಿವರು

ಅನುಬಂಧ-1

ANNEXURE 1

SI NO	RANK	Sanctioned	Actual	Vacancy
1	TOTAL AUTHORIZED STRENGTH (FROM DGP TO ASP, IPS RANK)	215	187	28
2	D.I.G.P (WIRELESS) (NON IPS)	1	0	1
3	D.I.G.P, K.S.R.P (NON IPS)	1	0	1
4	S.P (NON-IPS)	105	100	5
5	S.P (ARMED)	22	22	0
6	S.P. (WIRELESS)	3	3	0
7	S.P. (F.P.B.)	1	1	0
8	S.P. (DETECTIVE)	8	8	0
9	COMMANDANT (K.S.R.P) PRINCIPAL/ S.P	17	16	1
10	COMMANDANT (KSISF)	3	3	0
11	DEPUTY COMMDT (K.S.R.P)	8	5	3
12	DEPUTY COMMDT. (KSISF)	3	2	1
13	SDRF DEPUTY COMMDT.	4	0	4
14	DIRECTOR FSL	1	1	0
15	DEPUTY DIRECTOR	16	9	7
16	DY.S.P (CIVIL)	420	404	16
17	DYSP (DETECTIVE)	20	13	7
18	DY.S.P (ARMED)	65	65	0
19	DY.S.P (F.P.B)	12	12	0
20	DY.S.P (WIRELESS)	11	11	0
21	ASST. COMMDT. K.S.R.P	59	44	15
22	ASST COMMDT. KSISF	24	0	24
23	SENIOR SCIENTIFIC OFFICER	96	49	47
24	SCIENTIFIC OFFICER	202	101	101
25	P.I. (CIVIL)	1275	1266	9
26	PI (DETECTIVE)	40	40	0
27	P.I. (ARMED)	119	103	16
28	P.I. (F.P.B)	40	11	29
29	P.I. KSISF	72	72	0
30	P.I. (WIRELESS)	51	49	2
31	RPI (K.S.R.P)	131	99	32

Sl NO	RANK	Sanctioned	Actual	Vacancy
32	SDRF(PI)(KSRP)	6	0	6
33	SDRF(PI)(ARMED)	2	0	2
34	PSI (CIVIL)	3598	2689	909
35	ASI (CIVIL)	5932	5808	124
36	HC (CIVIL)	17797	17481	316
37	PC (CIVIL)	35114	30543	4571
38	DSI (CID)	70	39	31
39	PSI(INTELLIGENCE)	100	93	7
40	RSI (CAR/DAR)	487	343	144
41	ARSI (CAR/DAR)	2109	1985	124
42	AHC (CAR/DAR)	6349	5823	526
43	APC (CAR/DAR)	13624	10475	3149
44	PSI (FPB)	52	42	10
45	ASI(FPB)	11	5	6
46	HC (FPB)	32	26	6
47	PC (FPB)	64	59	5
48	PSI (WIRELESS)	177	135	42
49	ASI (WIRELESS)	351	313	38
50	HC (WIRELESS)	593	466	127
51	PC (WIRELESS)	451	266	185
52	RSI (KSRP)	349	270	79
53	ARSI (KSRP)	1278	1159	119
54	RHC (KSRP)	3888	3762	126
55	RPC (KSRP)	7888	5811	2077
56	PSI (KSISF)	225	124	101
57	ASI (KSISF)	378	14	364
58	HC (KSISF)	465	438	27
59	PC (KSISF)	1744	1545	199
	TOTAL	**106179**	**92410**	**13769**

* * *

ಅನುಬಂಧ-2

ಕರ್ನಾಟಕ ಪೊಲೀಸ್ ಇಲಾಖೆಯ ವೃಂದದ ಹುದ್ದೆಗಳ ವೇತನ ಶ್ರೇಣಿಗಳಿಗೂ ಇತರೆ ಇಲಾಖೆಯ ವೇತನ ಶ್ರೇಣಿಗಳಿಗಳು ಬಹಳಷ್ಟು ತಾರತಮ್ಯ ಇದ್ದುದರಿಂದ, ಈ ವೇತನ ಶ್ರೇಣಿಯ ತಾರತಮ್ಯವನ್ನು ಸಮತೋಲನಗೊಳಿಸುವುದು ಪೊಲೀಸ್ ಇಲಾಖೆಯ ಸಿಬ್ಬಂದಿಗಳ ಬೇಡಿಕೆಯಾಗಿತ್ತು. ಈ ವೇತನ ಶ್ರೇಣಿ ತಾರತಮ್ಯವನ್ನು ಸಮತೋಲನಗೊಳಿಸುವ ಸಲುವಾಗಿ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರುಗಳ ವೇತನಶ್ರೇಣಿಯ ಪರಿಷ್ಕರಣೆಯ ಕುರಿತು ರಾಜ್ಯ ಸರ್ಕಾರವು, ದಿನಾಂಕ:28.06.2016 ರಲ್ಲಿ ಶ್ರೀ. ರಾಘವೇಂದ್ರ ಔರಾದ್ಕರ್‌ರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿರುತ್ತದೆ. ಸರ್ಕಾರದ ಆದೇಶದಂತೆ ರಾಘವೇಂದ್ರ ಔರಾದ್ಕರ್ ಸಮಿತಿಯು ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಯವರುಗಳ ವೇತನ ಪರಿಷ್ಕರಣೆ ಸಂಬಂಧಿಸಿದಂತೆ ಈ ಕೆಳಕಂಡ ಶಿಫಾರಸ್ಸುಗಳೊಂದಿಗೆ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತದೆ;

Sl. No.	Rank	Existing scale	Proposed scale	Raise in Levels
1	Follower	10400-16400	11000-19000	One Level
2	Jamedar Follower	11600-21000	12500-24000	Two Levels
3	Police Constable	11600-21000	12500-24000	One Level
4	Head Constable	12500-24000	14550-26700	Two Levels
5	Asst. Sub Inspector	14550-26700	20000-36300	Three Levels*
6	Police Sub Inspector	20000-36300	22800-43200	Two Levels
7	Police Inspector	21600-40050	28100-50100	Four Levels*
8	Dy. Supdt. of Police	28100- 50100	30400-51300	One Level
9	Superintendent of Police	36300-53850	40050-56550	Two Levels

ಮುಂದುವರೆದು, ಶ್ರೀ. ರಾಘವೇಂದ್ರ ಔರಾದ್ಕರ್ ಸಮಿತಿಯು ಪೊಲೀಸ್ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಯವರುಗಳ ಸಮವಸ್ತ್ರ ಭತ್ಯೆ ಸಾರಿಗೆ ಭತ್ಯೆ ಕಷ್ಟ ಪರಿಹಾರ ಭತ್ಯೆ ಗಂಡಾಂತರ ಭತ್ಯೆ ಶ್ರಮದಾನ ಭತ್ಯೆ ಹಾಗೂ ಸದ್ಯಢ ಭತ್ಯೆಗಳನ್ನು ಪರಿಷ್ಕರಣೆ ಮಾಡಲು ಶಿಫಾರಸ್ಸು ಮಾಡಲಾಗಿರುತ್ತದೆ.

..2

ಶ್ರೀ ರಾಘವೇಂದ್ರ ಔರಾದ್ಕರ್ ವರದಿಯ ಶಿಫಾರಸ್ಸುಗಳನ್ನು ಭಾಗಶಃ ಅಂಗೀಕರಿಸಿದ ರಾಜ್ಯ ಸರ್ಕಾರವು ಆದೇಶ ಸಂಖ್ಯೆ: ಆಇ/9/ಎಸ್‌ಆರ್‌ಪಿ/2019, ದಿನಾಂಕ: 16.07.2019 ರಲ್ಲಿ ಪೊಲೀಸ್ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಯವರುಗಳ ವೇತನ ಶ್ರೇಣಿಗಳನ್ನು ದಿನಾಂಕ: 01.08.2019 ರಿಂದ ಜಾರಿಗೆ ಬರುವಂತೆ, ಈ ಕೆಳಕಂಡಂತೆ ಪರಿಷ್ಕರಣೆ ಮಾಡಿರುತ್ತದೆ.

Sl. No.	Rank	Revised Pay Scale (As per 6th Pay Commission) ₹	Raise in Levels	Total Policemen Benefited
1	Police Constable	23,500-47,650	One Level	42757
2	Head Constable	27,650-52,650	Two Level	27111
3	Asst. Sub Inspector	30,350-58,250	One Level	9030
4	Police Inspector	43,100-83,900	One Level	1511
5	SP (non-IPS)	70,850-1,07,100	One Level	127
	TOTAL			80536

ಶ್ರೀ ರಾಘವೇಂದ್ರ ಔರಾದ್ಕರ್ ಸಮಿತಿ ವರದಿಯ ಅನುಷ್ಠಾನದಿಂದ ಅನುಯಾಯಿ, ಜಮೇದಾರ್ ಅನುಯಾಯಿ, ಪಿ.ಎಸ್.ಐ ಹಾಗೂ ಪೊಲೀಸ್ ಉಪಾಧೀಕ್ಷಕರುಗಳ ವೇತನ ಶ್ರೇಣಿ ಪರಿಷ್ಕರಣೆಗಳನ್ನು ಹೊರತುಪಡಿಸಿ ಇತರೆ ಎಲ್ಲಾ ವೃಂದದ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರುಗಳ ವೇತನ ಶ್ರೇಣಿಗಳು ಪರಿಷ್ಕರಣೆಯಾಗಿ ಅನುಕೂಲವಾಗಿರುತ್ತವೆ.

ಭತ್ಯೆ ಪರಿಷ್ಕರಣೆ ಅನುಷ್ಠಾನ:

ಶ್ರೀ. ರಾಘವೇಂದ್ರ ಔರಾದ್ಕರ್ ಸಮಿತಿಯು ಪೊಲೀಸ್ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಯವರುಗಳ ಭತ್ಯೆಯನ್ನು ಪರಿಷ್ಕರಿಸುವಂತೆ ಮಾಡಿದ್ದ ಶಿಫಾರಸ್ಸುಗಳನ್ನು ಅಂಗೀಕರಿಸಿದ ಮಾನ್ಯ ಘನ ಸರ್ಕಾರವು, ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರುಗಳ ಭತ್ಯೆಗಳನ್ನು ಈ ಕೆಳಕಂಡಂತೆ ಪರಿಷ್ಕರಿಸಿರುತ್ತದೆ;

ಕ್ರ ಸಂ.	ಸರ್ಕಾರದ ಆದೇಶ ಸಂಖ್ಯೆ ಮತ್ತು ದಿನಾಂಕ:	ಭತ್ಯೆಗಳ ವಿವರ	ಭತ್ಯೆಯ ಮೊತ್ತ
1	ಎಫ್.ಡಿ 47 ಎಸ್‌ಆರ್‌ಪಿ 2016(1), ದಿನಾಂಕ: 21.11.2016	ಸಮವಸ್ತ್ರ ಭತ್ಯೆ	500.00
2	ಎಫ್.ಡಿ 47 ಎಸ್‌ಆರ್‌ಪಿ 2016(11), ದಿನಾಂಕ: 21.11.2016	ಸಾರಿಗೆ ಭತ್ಯೆ	600.00
3	ಆದೇಶ ಸಂಖ್ಯೆ: ಆಇ 6 ಎಸ್‌ಆರ್‌ಪಿ 2019, ದಿನಾಂಕ: 18.10.2019	ಕಷ್ಟ ಪರಿಹಾರ ಭತ್ಯೆ	
		ಅನುಯಾಯಿ	2000.00
		ಪಿ.ಸಿ	3000.00
		ಹೆಚ್.ಸಿ	2000.00
		ಎ.ಎಸ್.ಐ	2000.00
		ಪಿ.ಎಸ್.ಐ	2000.00
		ಪಿ.ಐ	1000.00

ಶ್ರೀ ರಾಘವೇಂದ್ರ ಔರಾದ್ಕರ್ ಸಮಿತಿಯು ಪೊಲೀಸ್ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಯವರುಗಳ ಭತ್ಯೆಗಳ ಪರಿಷ್ಕರಣೆಗೆ ಮಾಡಿದ್ದ ಶಿಫಾರಸ್ಸುಗಳಲ್ಲಿ ಗಂಡಾಂತರ ಭತ್ಯೆ ಶ್ರಮದಾನ ಭತ್ಯೆ ಹಾಗೂ ಸದೃಢ ಭತ್ಯೆಗಳನ್ನು ಹೊರತುಪಡಿಸಿ, ಇತರೆ ಎಲ್ಲಾ ಭತ್ಯೆಗಳನ್ನು ಪರಿಷ್ಕರಣೆ ಮಾಡಲಾಗಿದೆ. ಒಟ್ಟಾರೆಯಾಗಿ ಶ್ರೀ ರಾಘವೇಂದ್ರ ಔರಾದ್ಕರ್ ಸಮಿತಿಯ ಶಿಫಾರಸ್ಸುಗಳ ಅನುಷ್ಠಾನದಿಂದ ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 84773 ಅಧಿಕಾರಿ ಮತ್ತು ಸಿಬ್ಬಂದಿಯವರುಗಳಿಗೆ ಅನುಕೂಲವಾಗಿದೆ.